# ಸಿದ್ದರಾಮಯ್ಯ ಪತ್ರಕ್ಕೆ ಕಾಗೇರಿ ನಿರ್ಲಕ್ಷ್ಯದ ಉತ್ತರ

■ ವಿಕ ಸುದ್ದಿಲೋಕ ಬೆಂಗಳೂರು

17/11

ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಮಧ್ಯೆ ಮತ್ತೆ ಮುಸುಕಿನ ಗುದ್ದಾಟ ಆರಂಭವಾಗಿದ್ದು, ವಾಹನ ಹಾಗೂ ಸಿಬ್ಬಂದಿ ವಿಚಾರದಲ್ಲಿ ಸಿದ್ದರಾಮಯ್ಯ ಬರೆದ ಪತ್ರವನ್ನು ಸ್ಪೀಕರ್ ಕಚೇರಿ ಕಡೆಗಣಿಸಿರುವುದು ಈಗ ಬೆಳಕಿಗೆ ಬಂದಿದೆ.





ವಿಧಾನಸಭೆ ವಿಶೇಷ ಅಧಿವೇಶನ ಸಂದರ್ಭದಲ್ಲಿ ಸಿದ್ದರಾಮಯ್ಯ ಹಾಗೂ ಕಾಗೇರಿ ಮಧ್ಯೆ ಜಟಾಪಟಿ ಸೃಷ್ಟಿಯಾಗಿತ್ತು.

ನಿಲುವಳಿ ಸೂಚನೆ ಮಂಡನೆಯ ಪ್ರಾಥಮಿಕ ಚರ್ಚೆಯಲ್ಲಿ ಮಾತನಾಡುವ ಅವಧಿಗೆ ಸ್ಪೀಕರ್ ಕತ್ತರಿ ಹಾಕಿದ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಸಿಟ್ಟಾಗಿದ್ದರು. ಈ ವಿಚಾರ ಸದನದ ಹೊರಗೂ ವಿಸ್ತರಣೆಗೊಂಡಿತ್ತು. ಬಾದಾಮಿ ಪ್ರವಾಸ ಸಂದರ್ಭದಲ್ಲಿ ಸದನದ ಘಟನಾವಳಿ ಪ್ರಸ್ತಾಪಿಸಿ ಸಿದ್ದರಾಮಯ್ಯ 'ಕಾಗೇರಿಯವರಿಗೆ ಏನೂ ಅರ್ಥವಾಗುವುದಿಲ್ಲ 'ಎಂಬರ್ಥದಲ್ಲಿ ಮಾತನಾಡಿದ್ದರು. ಸ್ಪೀಕರ್ ಬಗ್ಗೆ ಸಿದ್ದರಾಮಯ್ಯ ಆಡಿದ ಮಾತಿಗೆ ತೀಕ್ಷ್ಣ ತಿರುಗೇಟು ನೀಡಿದ ಬಿಜೆಪಿ ಹಕ್ಕುಚ್ಯುತಿ ಮಂಡನೆಗೆ ಸಿದ್ಧತೆ ನಡೆಸಿತ್ತು. ಖುದ್ದು ಸಿಎಂ ಯಡಿಯೂರಪ್ಪ ಈ ಮುನ್ಸೂಚನೆ ನೀಡಿದ್ದರು. ಬಿಜೆಪಿಯ ಕೆಲ ಹಿರಿಯ ಸದಸ್ಯರು ಇದರ ಸಾಧ್ಯಾಸಾಧ್ಯತೆ ಬಗ್ಗೆ ವಿಶ್ಲೇಷಣೆ ನಡೆಸಿದ್ದರು.

ಆದರೆ ಸದನ ನಡೆಯದೇ ಇರುವ ಸಂದರ್ಭದಲ್ಲಿ ಈ ಘಟನೆಯಾಗಿದ್ದರಿಂದ ತಕ್ಷಣಕ್ಕೆ ಹಕ್ಕುಚ್ಯುತಿ ಮಂಡನೆ ಅಸಾಧ್ಯ. ಎಲ್ಲದಕ್ಕಿಂತ ಹೆಚ್ಚಾಗಿ ಸ್ಪೀಕರ್ ಸ್ವಯಂ ಪ್ರೇರಣೆಯಿಂದ ಹಕ್ಕುಚ್ಯುತಿ ನಿರ್ಣಯಕ್ಕೆ ಚಾಲನೆ ನೀಡುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ಸದನದ ಯಾವುದಾದರೂ ಸದಸ್ಯರ ಮೂಲಕ ದೂರು ನೀಡುವ ಬಗ್ಗೆ ಚಿಂತನ ನಡೆದಿತ್ತು.

ಆದರೆ ಇವಾದ ಬಳಿಕ ನಡೆದ ರಾಜಕೀಯ ಬೆಳವಣಿಗೆಗಳಿಂದ ಈ ವಿಚಾರಕ್ಕೆ ಹೆಚ್ಚಿನ ಮಹತ್ವ ಸಿಕ್ಕಿರಲಿಲ್ಲ.

ಇವೆಲ್ಲದರ ಮಧ್ಯೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಸ್ಪೀಕರ್‌ಗೆ ಪತ್ರ ಬರೆದು ತಮಗೆ ಫಾರ್ಚುನರ್ ವಾಹನ, ಇಬ್ಬರು ಚಾಲಕರು, ನಾಲ್ವರು ಕಚೇರಿ ಸಹಾಯಕರು ಹಾಗೂ ಒಬ್ಬ ಆಪ್ತ ಕಾರ್ಯದರ್ಶಿಯನ್ನು ನೀಡುವಂತೆ ಮನವಿ ಮಾಡಿದ್ದರು. ಇದಕ್ಕೆ ಸ್ಪೀಕರ್ ಕಚೇರಿಯಿಂದ ಸ್ಪಂದನೆ ದೊರೆತಿರಲಿಲ್ಲ. ಈ ಹಿನ್ನೆಲೆಯಲ್ಲಿ ತಮ್ಮ ಆಪ್ತರೊಬ್ಬರನ್ನು ಸ್ಪೀಕರ್ ಬಳಿ ಕಳುಹಿಸಿ ವಿಚಾರಿಸಿದರೂ ಪ್ರಯೋಜನವಾಗಿಲ್ಲ. 'ಅವರು ಪತ್ರ ಬರೆದಿರುವುದು ನಿಜ. ಆದರೆ ಈ ಪತ್ರ ಆಧರಿಸಿ ಏನು ಮಾಡಬೇಕೆಂಬುದು 'ಅರ್ಥ'ವಾಗುತ್ತಿಲ್ಲ' ಎಂದು ಸ್ಪೀಕರ್ ಪ್ರತಿಕ್ರಿಯೆ ನೀಡಿದ್ದಾರೆ ಎಂದು ತಿಳಿದು ಬಂದಿದೆ. ಈ ಮೂಲಕ ತಮಗೇನು ಅರ್ಥವಾಗುವುದಿಲ್ಲ ಎಂದು ಟೀಕೆ ಮಾಡಿದ್ದ ಸಿದ್ದರಾಮಯ್ಯಗೆ ನಯವಾದ ತಿರುಗೇಟು ನೀಡಿದ್ದಾರೆ ಎಂದು ತಿಳಿದು ಬಂದಿದೆ.